# ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು

**ಶಿವಾನಂದ ಜೋಗಿಯವರ***

**DOI: https://doi.org/10.5281/zenodo.21438559**

**ABSTRACT**

ಕನ್ನಡ ಸಾಹಿತ್ಯ ಚರಿತ್ರೆಯುದ್ದಕ್ಕೂ ಮತ್ತು ಜಾಗತಿಕ ಮಟ್ಟದಲ್ಲಿ ಮಹಿಳಾ ಹಕ್ಕುಗಳು, ಸಮಾನತೆ ಹಾಗೂ ಸಬಲೀಕರಣದ ಪರವಾದ ದನಿಗಳು ನಿರಂತರವಾಗಿ ಮೊಳಗುತ್ತಿವೆ. 12ನೇ ಶತಮಾನದ ಅಕ್ಕಮಹಾದೇವಿಯವರ ವಚನ ಕ್ರಾಂತಿಯಿಂದ ಹಿಡಿದು ಆಧುನಿಕ ಬರಹಗಾರ್ತಿಯರಾದ ಎಂ.ಕೆ. ಇಂದಿರಾ, ತ್ರಿವೇಣಿಯವರ ಸಾಹಿತ್ಯದವರೆಗೆ, ಸ್ತ್ರೀ ಮೇಲಿನ ದೌರ್ಜನ್ಯ ಹಾಗೂ ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧದ ಹೋರಾಟಗಳು ಹೇಗೆ ಅಭಿವ್ಯಕ್ತಿಗೊಂಡಿವೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಇದರೊಟ್ಟಿಗೆ, ಪಾಶ್ಚಿಮಾತ್ಯ ಸ್ತ್ರೀವಾದದ ವಿವಿಧ ಅಲೆಗಳು ಮತ್ತು ಭಾರತೀಯ ಮಹಿಳಾ ಚಿಂತಕಿಯರ ವಿಚಾರಧಾರೆಗಳು ಜಾಗತಿಕ ಸ್ತ್ರೀ ಸಂವೇದನೆಗಳನ್ನು ವಿಸ್ತರಿಸಿದ ಬಗೆಯನ್ನು ವಿಶ್ಲೇಷಿಸಲಾಗಿದೆ. ಐತಿಹಾಸಿಕ ಮತ್ತು ಜಾಗತಿಕ ಸ್ತ್ರೀವಾದಿ ನೆಲೆಗಳನ್ನು ಗುರುತಿಸುವ ಜೊತೆಗೆ, ಆಧುನಿಕ ಕಾಲಘಟ್ಟದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಯ ಪರಿಕಲ್ಪನೆಗಳು ಸ್ವೇಚ್ಛಾಚಾರದತ್ತ ವಾಲುತ್ತಿರುವ ಬಗ್ಗೆ ವಿಮರ್ಶಾತ್ಮಕ ಕಾಳಜಿಯನ್ನು ವ್ಯಕ್ತಪಡಿಸಲಾಗಿದೆ. ಮಹಿಳೆಯರು ತಮ್ಮ ಹಕ್ಕುಗಳನ್ನು ಜವಾಬ್ದಾರಿಯುತವಾಗಿ ಬಳಸಿಕೊಂಡು, ಮೌಲ್ಯಾಧಾರಿತ ಸಬಲೀಕರಣವನ್ನು ಸಾಧಿಸಬೇಕೆಂಬ ಆಶಯವನ್ನು ಇದು ಒಳಗೊಂಡಿದೆ.

**KEYWORDS:** ಸ್ತ್ರೀವಾದಿ ನೆಲೆಗಳು, ಮಹಿಳಾ ಸಬಲೀಕರಣ, ವಚನ ಸಾಹಿತ್ಯ, ಪಾಶ್ಚಿಮಾತ್ಯ ಸ್ತ್ರೀವಾದ, ಪಿತೃಪ್ರಧಾನ ವ್ಯವಸ್ಥೆ.

ಕನ್ನಡ ಸಾಹಿತ್ಯವು ಭಾರತದ ಅತ್ಯಂತ ಪ್ರಾಚೀನ ಭಾಷೆಗಳಲ್ಲೊಂದು. ಇದರ ಉಗಮ ವಿಕಾಸ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿದ್ದು ಶಾಸನಗಳು, ತಾಮ್ರಪಟಗಳು, ಶಿಲಾಶಾಸನಗಳು ಮತ್ತು ಪುರಾತನ ಕವಿಗಳ ಕೃತಿಗಳು ಇದಕ್ಕೆ ಸಾಕ್ಷಿಗಳಾಗಿವೆ. ಕನ್ನಡ ಸಾಹಿತ್ಯದ ಪ್ರಾರಂಭವನ್ನು ಕ್ರಿ.ಶ. 450ರ ಹಲ್ಮಿಡಿ ಶಾಸನದಿಂದ ಗುರುತಿಸಲಾಗುತ್ತದೆ. ಇದು ಕನ್ನಡದ ಮೊದಲ ಲಿಖಿತ ದಾಖಲೆ.

ನಂತರದ ಮತ್ತೊಂದು ದಾಖಲೆಯೆಂದರೆ ಕ್ರಿ.ಶ. 7ನೇ ಶತಮಾನದ ಬದಾಮಿ ಕಪ್ಪೆ

* **ಶಿವಾನಂದ ಜೋಗಿಯವರ,** ಮುಖ್ಯಸ್ಥರು, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ ಸಿ.ಬಿ.ಎಸ್.ಇ. ಶಾಲೆ, ಗದಗ.

ಅರೆಭಟ್ಟನ ತ್ರಿಪದಿ ಶಾಸನ. ಇದರ ಮೂಲಕ ಕನ್ನಡದ ಛಂದೋಬದ್ಧ ಕಾವ್ಯ ಪರಂಪರೆ ಅಭಿವೃದ್ಧಿಯಾಯಿತು. ಕನ್ನಡ ಸಾಹಿತ್ಯ ಹೀಗೆ ಒಂದೊಂದು ಮಹತ್ವದ ದಾಖಲೆಯನ್ನು ಪಡೆದುಕೊಳ್ಳುತ್ತಾ ಕ್ರಿ.ಶ. 9ನೇ ಶತಮಾನದಲ್ಲಿ ಕವಿರಾಜಮಾರ್ಗ ಕೃತಿ ರಚಿತವಾಗಿದ್ದು ಸಾಹಿತ್ಯದ ಅಧ್ಯಯನ ಹಾಗೂ ಸಂಶೋಧನೆಗೆ ಭದ್ರ ಬುನಾದಿಯಾಯಿತು. ಇದನ್ನು ಕನ್ನಡದ ಮೊದಲ ಲಾಕ್ಷಣಿಕ ಗ್ರಂಥವೆಂದು ಇದರಲ್ಲಿ ಕನ್ನಡ ನಾಡಿನ ವಿಸ್ತಾರ, ಕವಿಗಳ ಕಾವ್ಯ ಶೈಲಿ, ಛಂದಸ್ಸು, ಪ್ರಾಸ, ಯತಿ, ಕನ್ನಡ ನಾಡಿನ ಜನತೆಯ ಪದ ಪಾಂಡಿತ್ಯ ಕುರಿತು ಚರ್ಚಿಸಲಾಗಿದೆ.

ಕ್ರಿ.ಶ. 940ರಲ್ಲಿ ರತ್ನತ್ರಯರಿಂದ ಅನೇಕ ಚಂಪೂ ಕಾವ್ಯಗಳು ರಚಿತವಾಗಿದ್ದು ಅದರಲ್ಲಿ ಮಹತ್ವದ ಕೃತಿಗಳೆಂದರೆ “ವಿಕ್ರಮಾರ್ಜುನ ವಿಜಯಂ, ಆದಿಪುರಾಣ, ಸಾಹಸಭೀಮ ವಿಜಯಂ, ಅಜಿತನಾಥ ತೀರ್ಥಂಕರ ಪುರಾಣ” ಹೀಗೆ ಮುಂತಾದ ಕೃತಿಗಳು ಸಾಹಿತ್ಯದ ಮಹತ್ವವನ್ನು ಹೆಚ್ಚಿಸುತ್ತಾ ಕನ್ನಡದ ಕಂಪನ್ನು ನಾಡಿನಾದ್ಯಂತ ಪಸರಿಸಿವೆ. ಈ ಎಲ್ಲ ಸಾಹಿತ್ಯ ಪರಂಪರೆಯನ್ನು ಕವಿಗಳು ಹಳಗನ್ನಡ ಸಾಹಿತ್ಯವೆಂದು ಕರೆದಿದ್ದುಂಟು.

ಕ್ರಿ.ಶ. 1150ರಿಂದ 1900ರವರೆಗಿನ ಸಾಹಿತ್ಯ ಕಾಲವನ್ನು ನಡುಗನ್ನಡ ಅಥವಾ ಮಧ್ಯಕಾಲೀನ ಕನ್ನಡ ಸಾಹಿತ್ಯವೆಂದು ವಿಭಾಜಿಸಲಾಗಿದೆ. ಈ ಕಾಲಾವಧಿಯಲ್ಲಿ ವಚನ ಸಾಹಿತ್ಯ, ದಾಸರ ಕೀರ್ತನೆಗಳು, ಸಾಂಗತ್ಯ ಪರಂಪರೆಯು ಕನ್ನಡ ಭಾಷೆಗೆ ಹೊಸತನವನ್ನುಂಟು ಮಾಡಿತು. ಇದೇ ಸಂದರ್ಭದಲ್ಲಿ ಬಸವಣ್ಣ, ಅಲ್ಲಮಪ್ರಭು, ಜೇಡರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಮುಂತಾದ ಶಿವಶರಣರು ಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪಿಸಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ನಾಂದಿ ಹಾಡಿದರು. ಬಸವಣ್ಣನವರು ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಸಂಪ್ರದಾಯದ ವಿರುದ್ಧ ಮತ್ತು ವೈಷ್ಣವ ಪರಂಪರೆಗೆ “ವೇದ ಓದಿದರೇನು ಫಲ? ಶಾಸ್ತ್ರ ಕೇಳಿದರೇನು ಫಲ?” ಎಂದು ದಿಟ್ಟತನದಿಂದ ಉತ್ತರಿಸಿದರು.

ಕರ್ನಾಟಕದಲ್ಲಿ ಸ್ತ್ರೀ ಸಂವೇದನೆಗಳು: ಜೊತೆಗೆ ಅಕ್ಕಮಹಾದೇವಿ, ಶರಣೆ ಸತ್ಯಕ್ಕ, ಸೂಳೆ ಸಂಕವ್ವ, ಆಯ್ದಕ್ಕಿ ಲಕ್ಕಮ್ಮ, ಅಮುಗೆ ರಾಯಮ್ಮ, ಮುಂತಾದ ವಚನಕಾರ್ತಿಯರು ಕಲ್ಯಾಣದ ಕ್ರಾಂತಿಯ ಜ್ಯೋತಿಗೆ ಸ್ತ್ರೀಯರು ಕೂಡಾ ಸಾಕ್ಷಿಯಾಗಿದ್ದಾರೆ. ಕನ್ನಡಿಗರ ಮನದಲ್ಲಿ ಮನೆಮಾತಾಗಿದ್ದ ಮೌಢ್ಯಗಳು, ಸ್ತ್ರೀಯರ ಮೇಲಿನ ದೌರ್ಜನ್ಯ, ಅಸಮಾನತೆ, ಲಿಂಗತಾರತಮ್ಯ, ಶಿಕ್ಷಣ, ಉದ್ಯೋಗ ಮುಂತಾದ ವಿಷಯಗಳ ಕುರಿತು ತೀವ್ರವಾದ ಚರ್ಚೆ ಹಾಗೂ ಹೋರಾಟಗಳು ನಡೆದುದರ ಫಲವಾಗಿ ಅರಸೊತ್ತಿಗೆಯ ಆಡಳಿತ ವ್ಯವಸ್ಥೆಯನ್ನೆ ಅಲ್ಲಾಡಿಸಿತು. ಅಕ್ಕಮಹಾದೇವಿ ಹೆಣ್ಣು ಗಂಡು ಎಂಬ ತಾರತಮ್ಯದ ಕುರಿತು

**“ಮೊಲೆ ಮುಡಿ ಬಂದರೆ ಹೆಣ್ಣೆಂಬರು**
**ಗಡ್ಡ ಮೀಸೆ ಬಂದರೆ ಗಂಡೆಂಬರು**
**ಒಳಗೆ ಸುಳಿವಾತ್ಮ ಹೆಣ್ಣು ಅಲ್ಲ, ಗಂಡು ಅಲ್ಲ”**

ಎಂದು ಲಿಂಗ ಸಮಾನತೆಯ ವಿರುದ್ಧ ಧ್ವನಿ ಎತ್ತಿದರು. ಅಲ್ಲದೆ “ಲೋಕದ ಡೊಂಕು ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ” ಎಂದು ಸಾಮಾಜಿಕ ಕಳಕಳಿಯನ್ನು ಮೆರೆಯುತ್ತಾ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ತಾತ್ವಿಕ ಕಟ್ಟುಪಾಡುಗಳನ್ನು ಕಠುವಾಗಿ ವಿರೋಧಿಸಿದವರು ವಚನಕಾರ್ತಿಯರು.

ಇವರ ಕಾಲದಲ್ಲಿ ಕೆಲವು ಜ್ವಲಂತ ಸಮಸ್ಯೆಗಳು ಇದ್ದವು. ಅವುಗಳೆಂದರೆ ಪುರುಷರ ಅಧಿಪತ್ಯ, ಶಿಕ್ಷಣದ ಅಭಾವ, ಬಾಲ್ಯ ವಿವಾಹ, ವಿಧವೆಯ ಸ್ಥಿತಿ, ಸ್ವಾತಂತ್ರ್ಯದ ಕೊರತೆ, ಧಾರ್ಮಿಕ ಕಟ್ಟುಪಾಡುಗಳ ವಿರುದ್ಧ ಹೋರಾಟ ಮಾಡುತ್ತ ಮಹಿಳೆಯರು ಆತ್ಮಗೌರವ

ಮೆರೆದವರು.

ಭಾರತೀಯ ಮಹಿಳಾ ಚಿಂತಕಿಯರು (Indian Women Thinkers): ಭಾರತೀಯ ಮಹಿಳಾ ಚಿಂತಕಿಯರು ಸಮಾಜ, ಸಾಹಿತ್ಯ, ರಾಜಕೀಯ, ಶಿಕ್ಷಣ ಮತ್ತು ಸ್ತ್ರೀ ಸಮಸ್ಯೆಗಳ ಮುಕ್ತಿಯ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಅವರ ಚಿಂತನೆಗಳು ಮಹಿಳಾ ಸಬಲೀಕರಣಕ್ಕೆ ದಾರಿ ತೋರಿದವು. ಅಂತವರಲ್ಲಿ ಮೊದಲಿಗರೆಂದರೆ:

1. **ಸಾವಿತ್ರಿಬಾಯಿ ಘುಲೆ:** ಇವರು ಹೆಣ್ಣಿನ ಶಿಕ್ಷಣಕ್ಕಾಗಿ ಸಮಾಜದ ನಿಂದನೆ, ಅವಮಾನ ಸಹಿಸಿಕೊಂಡು ಮಹಿಳೆಯರಿಗೆ ಶಿಕ್ಷಣ ಕೊಟ್ಟ ಮೊದಲ ಅಕ್ಷರದವ್ವ.
2. **ಪಂಡಿತಾ ರಮಾಬಾಯಿ:** ಇವರು ವಿಧವೆಯರ ಸ್ಥಿತಿ ಸುಧಾರಣೆ, ಶಿಕ್ಷಣ, ಸಮಾನ ಹಕ್ಕುಗಳಿಗಾಗಿ ಶ್ರಮಿಸಿದರು.
3. **ಮಹಾಶ್ವೇತಾದೇವಿ:** ಸಾಮಾಜಿಕ ಅಸಮಾನತೆ, ಆದಿವಾಸಿ ಹಕ್ಕುಗಳು, ಮಹಿಳಾ ಸಮಸ್ಯೆಗಳ ಕುರಿತು ಸಾಹಿತ್ಯ ರಚಿಸಿದವರು.
4. **ಅಮೃತಾ ಪ್ರೀತಂ:** ಇವರು ಪಂಜಾಬಿ ಕವಯಿತ್ರಿ. ತಮ್ಮ ಬರಹದಲ್ಲಿ ಪ್ರೀತಿ, ಮಹಿಳಾ ನೋವುಗಳು, ಸ್ವಾತಂತ್ರ್ಯದ ಕುರಿತು ಅನೇಕ ಕವಿತೆಗಳನ್ನು ರಚಿಸಿ ಸಮಾಜಕ್ಕೆ ಎಚ್ಚರಿಕೆಯ ಸಂದೇಶ ನೀಡಿದ್ದಾರೆ.

ಇದರಂತೆ ಸರೋಜಿನಿ ನಾಯ್ಡು, ಕಮಲಾದಾಸ್, ಇಸ್ಮತ್ ಚುಗ್ತಾಯಿ ಎಂಬ ಭಾರತೀಯ ಬರಹಗಾರ್ತಿಯರು ಕೂಡಾ ಮಹಿಳಾ ಚಿಂತನೆಗಳಲ್ಲಿ ತೊಡಗಿಕೊಂಡಿದ್ದಾರೆ.

ಕನ್ನಡ ಸಾಹಿತ್ಯ ವಲಯದಲ್ಲಿ 1900ರ ಕಾಲಾವಧಿಯಲ್ಲಿ ಎಂ.ಕೆ. ಇಂದಿರಾ ಅವರು ರಚಿಸಿದ "ಫಣಿಯಮ್ಮ" ಕಾದಂಬರಿಯಲ್ಲಿ ಬಾಲ್ಯ ವಿವಾಹದಿಂದಾಗುವ ನೋವುಗಳು, ಸಮಾಜದ ಜನರ ಚುಚ್ಚು ಮಾತುಗಳು, ವೈದಿಕ ಪರಂಪರೆಯ ಕಠಿಣ ವ್ರತಾಚರಣೆಗಳು, ಸಮಾಜದ ನಿರ್ಬಂಧಗಳು ಅವಳು ತೊಡುವ ಬಟ್ಟೆಗಳನ್ನು, ಮಾಡಿಕೊಳ್ಳುವ ಸಿಂಗಾರವನ್ನು ಅಣುಕಿಸತೊಡಗಿದವು.

ಇನ್ನೊಬ್ಬ ಕನ್ನಡದ ಬರಹಗಾರ್ತಿ ಎಂದರೇ ತ್ರಿವೇಣಿ. ಇವರ "ಬಿಡುಗಡೆ" ಕಾದಂಬರಿಯಲ್ಲಿ ನಾಯಕಿಯ ಜೀವನದ ಮೂಲಕ ಮಹಿಳೆಯೊಬ್ಬಳ ಸಮಾಜದ ನಿರೀಕ್ಷೆಗಳು, ಕುಟುಂಬದ ಒತ್ತಡ, ತನ್ನದೇ ಆದ ಆಂತರಿಕ ಸಂಕಟಗಳ ನಡುವೆ ಸಿಲುಕಿ ನರಳುವ ಪ್ರಸಂಗಗಳನ್ನು ಚಿತ್ರಿಸಲಾಗಿದೆ. ನಾಯಕಿ ತನ್ನ ಬದುಕಿನ ಅರ್ಥವನ್ನು ಹುಡುಕುತ್ತಾ ಬಿಗಿ ಹಿಡಿದ ಬಂಧನಗಳಿಂದ ಹೊರ ಬರಲು ಪ್ರಯತ್ನಿಸುವುದು ಈ ಕೃತಿಯ ಕೇಂದ್ರಭಾವ.

ಇಂತಹ ಅನೇಕ ಕನ್ನಡ ಹಾಗೂ ಭಾರತೀಯ ಮಹಿಳಾ ಬರಹಗಾರ್ತಿಯರ ಚಿಂತನೆಗಳು, ಹೋರಾಟಗಳು ಗರಿಗೆದರಲು ಕಾರಣವೇ ಪಾಶ್ಚಾತ್ಯ ಮಹಿಳಾ ಚಿಂತಕಿಯರ ಚಿಂತನೆಗಳು ಮತ್ತು ಹೋರಾಟಗಳು.

ಪಾಶ್ಚಾತ್ಯ ಮಹಿಳಾ ಚಿಂತನೆಗಳು (Western Feminist Thought): ಭಾರತದಿಂದ ಹೊರಗೆ ಕಾಲಿಟ್ಟು ನೋಡಿದಾಗ ಅಥವಾ ಆಳವಾಗಿ ಸಂಶೋಧನೆಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡಾಗ ಅಲ್ಲಿಯೂ ಕೂಡಾ ಅನೇಕ ಮಹಿಳಾ ಚಿಂತಕಿಯರ ಹೋರಾಟದ ಸದ್ದು ಕರ್ಣಪಟಲಕ್ಕೆ ತಿವಿಯದೆ ಇರದು. ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳೆಯರ ಹಕ್ಕುಗಳಿಗಾಗಿ, ಸಮಾನತೆಗಾಗಿ, ಸ್ವಾತಂತ್ರ್ಯಕ್ಕಾಗಿ ಮತ್ತು ಸಬಲೀಕರಣಕ್ಕಾಗಿ ಆಗಾಗ ಹೋರಾಟಗಳು ಚಿಂತನೆಗಳು ಕಾಲಕ್ರಮೇಣವಾಗಿ ವಿವಿಧ ಹಂತಗಳಲ್ಲಿ ನಡೆದಿರುವುದು

ಬೆಳಕಿಗೆ ಬಂದಿರುವ ವಿಷಯವಾಗಿದೆ. ಅಂತಹ ಪ್ರಮುಖ ಅಲೆಗಳೆಂದರೆ–

1. **ಮೊದಲ ಅಲೆ (First Wave Feminism):** 19ನೇ ಶತಮಾನದ ಹಂತದಲ್ಲಿ ಮಹಿಳೆಯರು ತಮ್ಮ ಮೂಲಭೂತ ಹಕ್ಕುಗಳಿಗಾಗಿ ಹೋರಾಟ ನಡೆಸಿದರು. ಮತದಾನದ ಹಕ್ಕು, ಶಿಕ್ಷಣದ ಹಕ್ಕುಗಳನ್ನು ಮೇರಿ ಉಲ್‌ಸ್ಟೋನ್‌ಕ್ರಾಫ್ಟ್ ಲೇಖಕಿ ತನ್ನ (Vindication of the Rights of Women) ನಲ್ಲಿ ಮಹಿಳೆಯರು ಪುರುಷರಿಗೆ ಸಮಾನರು ಎಂದು ವಾದಿಸಿದರು.
2. **ದ್ವಿತೀಯ ಅಲೆ (Second Wave Feminism):** 20ನೇ ಶತಮಾನ. ಈ ಹಂತದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಸಮಾನತೆಗಳ ವಿರುದ್ಧ ಹೋರಾಟ ನಡೆಯಿತು. ಉದ್ಯೋಗದಲ್ಲಿ ಸಮಾನತೆ, ದೇಹದ ಮೇಲೆ ಸ್ವಾತಂತ್ರ್ಯ, ಲಿಂಗಭೇದ ವಿರೋಧವನ್ನು ಸಿಮೋನ್ ಡಿ ಬುವಾರ್ (Simone de Beauvoir) ತಮ್ಮ ಕೃತಿಯಾದ ದಿ ಸೆಕೆಂಡ್ ಸೆಕ್ಸ್ (The Second Sex) ದಲ್ಲಿ “ಮಹಿಳೆ ಹುಟ್ಟುವುದಿಲ್ಲ, ರೂಪಗೊಳ್ಳುತ್ತಾಳೆ” ಎಂಬ ಪ್ರಸಿದ್ಧ ಹೇಳಿಕೆಯನ್ನು ನೀಡಿದರು. ಬೆಟ್ಟಿ ಫ್ರೀಡಾನ್ ತಮ್ಮ ದಿ ಫೆಮಿನೈನ್ ಮಿಸ್ಟಿಕ್ ಕೃತಿಯಲ್ಲಿ ಗೃಹಿಣಿಯರ ಅಸಮಾಧಾನವನ್ನು ವಿಶ್ಲೇಷಿಸಿದರು.
3. **ತೃತೀಯ ಅಲೆ (Third Wave Feminism):** ಕ್ರಿ.ಶ. 1990ರ ದಶಕದಲ್ಲಿ ವೈವಿಧ್ಯತೆ ಮತ್ತು ವೈಯಕ್ತಿಕ ಗುರುತಿನ ಮೇಲೆ ಒತ್ತು ನೀಡಲಾಗಿದೆ. ವರ್ಣ, ಲಿಂಗ, ವರ್ಗ ಮತ್ತು ಸಂಸ್ಕೃತಿ ಸೇರಿ ಮಹಿಳಾ ಅನುಭವ ಹಾಗೂ ಸಂಯೋಜಿತ ಅಸಮಾನತೆಗಳನ್ನು ಬೆಲ್ ಹುಕ್ಸ್ ಲೇಖಕಿ ವರ್ಣ ಮತ್ತು ಲಿಂಗದ ಸಂಬಂಧವನ್ನು ವಿವರಿಸಿದರು.
4. **ಚತುರ್ಥ ಅಲೆ (Fourth Wave Feminism):** 21ನೇ ಶತಮಾನ. ಇದು ಡಿಜಿಟಲ್ ಯುಗದ ಮಹಿಳಾ ಚಳುವಳಿಯಾಗಿದೆ. ಸಾಮಾಜಿಕ ಮಾಧ್ಯಮಗಳ ಮೂಲಕ ಹೋರಾಟ, ಲೈಂಗಿಕ ಕಿರುಕುಳದ ವಿರುದ್ಧ ಜಾಗೃತಿ ಮೂಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಉದಾಹರಣೆಯಾಗಿ ಮೀ ಟೂ (Me Too). ಮಹಿಳೆಯರು ತಮ್ಮ ಅನುಭವಗಳನ್ನು ಬಹಿರಂಗಪಡಿಸುವ ಚಳುವಳಿ. ಸಮಾನತೆ (Equality), ಮಾನವ ಹಕ್ಕುಗಳು, ಪಿತೃಪ್ರಧಾನ (Patriarchy) ವ್ಯವಸ್ಥೆಯನ್ನು ವಿರೋಧಿಸಿದರು.

**ಮಲಾಲಾ ಯೂಸುಫ್‌ಝಾಯಿ:** ಪಾಕಿಸ್ತಾನದ ಮಹಿಳಾ ಹೋರಾಟಗಾರ್ತಿ, 1997ರಲ್ಲಿ ಪಾಕಿಸ್ತಾನದ ಸ್ವಾತ್ ಕಣಿವೆಯಲ್ಲಿ ಜನಿಸಿದ ಇವಳು ತಾಲಿಬಾನ್ ವಿರುದ್ಧವಾಗಿ ಹೆಣ್ಣುಮಕ್ಕಳ ಶಿಕ್ಷಣದ ಹಕ್ಕಿಗಾಗಿ ಧ್ವನಿ ಎತ್ತಿದ ಅತ್ಯಂತ ಕಿರಿಯ ವಯಸ್ಸಿನವಳು. 2012ರಲ್ಲಿ ತಾಲಿಬಾನಿಗಳ ದಾಳಿ ಎದುರಿಸಿ ಬದುಕಿ ಹೊರಬಂದು ಮತ್ತೆ ತನ್ನ ಹೋರಾಟವನ್ನು ಛಲ ಬಿಡದೆ ಮುಂದುವರೆಸಿದಳು. ಹೀಗಾಗಿ ಇಡೀ ವಿಶ್ವವೇ ಗಮನಿಸುತ್ತಿದ್ದ ಇವಳ ಹೋರಾಟಕ್ಕೆ ಹಲವು ರಾಷ್ಟ್ರದ ಮಹಿಳಾ ಹೋರಾಟಗಾರ್ತಿಯರು ಧ್ವನಿ ಎತ್ತಿದ ಪ್ರಯುಕ್ತವಾಗಿ 2014ರಲ್ಲಿ ಅಂದರೇ ಕೇವಲ ತನ್ನ 17ನೇ ವಯಸ್ಸಿನಲ್ಲಿ ನೊಬೆಲ್ ಶಾಂತಿ ಪುರಸ್ಕಾರಕ್ಕೆ ಭಾಜನಳಾದಳು. ನೊಬೆಲ್ ಶಾಂತಿ ಪುರಸ್ಕಾರ ಪಡೆದವರಲ್ಲಿ ಇವಳೇ ಅತ್ಯಂತ ಕಿರಿಯಳು ಎಂಬ ಖ್ಯಾತಿ ಇವಳಿಗಿದೆ.

**ರಾಡಿಕಲ್ ಫೆಮಿನಿಸಂ (Radical Feminism):** ಇದು ಸಮಾಜಕ್ಕೆ ಅಂಟಿಕೊಂಡಿರುವ ಪಿತೃಪ್ರಧಾನ ವ್ಯವಸ್ಥೆಯೇ ಮಹಿಳೆಯರ ಶೋಷಣೆಗೆ ಕಾರಣ ಎಂದು ಹೇಳುತ್ತದೆ. ಮಹಿಳೆಯರ ದೇಹ, ಲೈಂಗಿಕತೆ ಮತ್ತು ಜೀವನದ ಮೇಲಿರುವ ನಿಯಂತ್ರಣವನ್ನು ವಿರೋಧಿಸುತ್ತದೆ. ಕೇಟ್ ಮಿಲೆಟ್ (Kate Millett) : ತಮ್ಮ ಕೃತಿಯಾದ ‘ಸೆಕ್ಷುಯಲ್

ಪಾಲಿಟಿಕ್ಸ್' ನಲ್ಲಿ ಪಿತೃಸತ್ತಾತ್ಮಕತೆಯನ್ನು ವಿಶ್ಲೇಷಿಸಿದರು.

ಮಾರ್ಕ್ಸ್‌ವಾದಿ (Marxist) ಅವರು ಮಹಿಳೆಯರ ಶೋಷಣೆಗೆ ಆರ್ಥಿಕ ವ್ಯವಸ್ಥೆಯೂ ಕಾರಣ ಎಂದು ಹೇಳಿದರು.

**ಪೋಸ್ಟ್ ಮಾಡರ್ನ್ ಫೆಮಿನಿಸಂ (Postmodern Feminism):** ಇವರ ಪ್ರಕಾರ "ಮಹಿಳೆ" ಒಂದು ರೀತಿಯ ಅನುಭವವಲ್ಲ, ಅವಳು ಭಾಷೆ, ಸಂಸ್ಕೃತಿ, ಜ್ಞಾನ ಮತ್ತು ಮಹಿಳಾ ಗುರುತನ್ನು ರೂಪಿಸುತ್ತಾಳೆ.

**ಎಕೋ ಫೆಮಿನಿಸಂ (Ecofeminism):** ಅವರು ಮಹಿಳೆಯರ ಶೋಷಣೆ ಮತ್ತು ಪ್ರಕೃತಿ ಶೋಷಣೆ ಒಂದೇ ಮೂಲದಿಂದ ಬರುತ್ತವೆ ಎಂದು ಪ್ರತಿಕ್ರಿಯಿಸಿದ್ದಾರೆ.

**ವಿಮರ್ಶೆ:** ಜಗತ್ತು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅದೆಷ್ಟು ಮುಂದುವರೆದಿದೆಯೋ ಅದೇ ರೀತಿಯ ವೇಗದಲ್ಲಿ ಮಹಿಳಾ ಸಮಸ್ಯೆಗಳು ದಿನದಿಂದ ದಿನಕ್ಕೆ ಹೊಸ ಹೊಸ ತಿರುವುಗಳನ್ನು ಪಡೆದುಕೊಳ್ಳುತ್ತಾ ಸಮಾಜದ ನೆಮ್ಮದಿಯನ್ನು ಹಾಳು ಮಾಡುತ್ತಾ ಭಯಾನಕ ವಾತಾವರಣವನ್ನು ಸೃಷ್ಟಿಸುತ್ತಿವೆ. ನೀಡಿರುವ ರಾಜಕೀಯ ಹಕ್ಕು ಮಾನ್ಯತೆಗಳನ್ನು, ಸಮಾನತೆಯ ತತ್ವಗಳನ್ನು ಸಮರ್ಪಕವಾಗಿ ಬಳಸಿಕೊಂಡವರು ತೀರಾ ವಿರಳ. ಇಂದಿನ ದಿನಮಾನಗಳಲ್ಲಿ ಸಮಾನತೆಯು ಸ್ವೇಚ್ಛಾಚಾರವಾಗಿರುವುದು ಕಂಡು ಬರುತ್ತಿದೆ. ಉದಾಹರಣೆಗೆ ಹೊಸ ವರ್ಷಾಚರಣೆಯ ಸಂದರ್ಭದಲ್ಲಿ ಮದ್ಯ ವ್ಯಸನಿಗಳಾಗಿ ಸಂಭ್ರಮಿಸುವ ಸಮಯದಲ್ಲಿ ಅವರು ತೋರುವ ಹುಚ್ಚು ವರ್ತನೆಗಳು ಪೋಷಕರನ್ನು ತಲೆತಗ್ಗಿಸುವಂತೆ ಮಾಡುತ್ತಿವೆ. ಜಗತ್ತಿನ ಫ್ಯಾಷನ್ ಅನುಕರಣೆ ಮಾಡುತ್ತ ನಮ್ಮ ಸಂಸ್ಕೃತಿಗೆ ಮಾರಕವಾಗುವ ಉಡುಗೆ-ತೊಡುಗೆಗಳನ್ನು ಧರಿಸಿರುವುದು ಇಂದಿನ ಯುವಕರು ಕಾಮುಕರಾಗಲು ಅದು ಕೂಡ ಒಂದು ಕಾರಣವೇ ಆಗಿದೆ. ಇಂದು ಬೆಳೆದು ನಿಂತ ಮಹಾನ್ ನಗರಗಳಲ್ಲಿನ ಕ್ಲಬ್-ಪಬ್, ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಮಾನಹಾನಿಗೊಳಗಾದ ಪ್ರಕರಣಗಳ ಸಂಖ್ಯೆ ಕೂಡಾ ದಿನದಿಂದ ದಿನಕ್ಕೆ ಏರುತ್ತಲೇ ಇದೆ.

**ನಿರ್ಣಯ:** ಪ್ರಾಚೀನ ಕಾಲದಿಂದಲೂ ಇಂದಿನವರೆಗೂ "ಸ್ತ್ರೀ"ಗೆ ನಮ್ಮಲ್ಲಿ ಅತ್ಯಂತ ಗೌರವಪೂರ್ವಕವಾದ ಸ್ಥಾನಮಾನಗಳನ್ನು ನೀಡಿದ್ದರೂ ಅದು ಕಾರ್ಯಾಚರಣೆಗೆ ಬಾರದಿರುವುದು ವಿಷಾದನೀಯ ಸಂಗತಿ. ಅವಳಿಗೆ ನೀಡಿದ ಸ್ಥಾನಮಾನಗಳು, ಹಕ್ಕು ಮಾನ್ಯತೆಗಳನ್ನು ಯೋಗ್ಯರೀತಿಯಲ್ಲಿ ಬಳಸಿಕೊಂಡು ಸಮಾಜದಲ್ಲಿನ ಸಾವಿರಾರು ಸಮಸ್ಯೆಗಳ ಸಂಕೋಲೆಯಿಂದ ಹೊರಬಂದು ಜಗತ್ತನ್ನು ರಕ್ಷಿಸುವ "ಜಗಜ್ಜನನಿ"ಯಾಗಲಿ ಎಂದು ಪ್ರತಿಯೊಬ್ಬ ಪುರುಷರ ಹಾರೈಕೆ.

**ಪರಾಮರ್ಶನ ಗ್ರಂಥಗಳು:**

1. ಎಂ.ಕೆ. ಇಂದಿರಾ, (1976), ಫಣಿಯಮ್ಮ, ಬೆಂಗಳೂರು: ಸಾಹಿತ್ಯ ಭಂಡಾರ.
2. ತ್ರಿವೇಣಿ, (1956), ಬಿಡುಗಡೆ, ಮೈಸೂರು: ಡಿ.ವಿ.ಕೆ. ಮೂರ್ತಿ ಪ್ರಕಾಶನ.